## 27

# ಅನಂತರದ ಅಪೊಸ್ತಲಿಕ ಚರಿತ್ರೆ

### I. ಪೌಲನ ಅನಂತರದ ಚರಿತ್ರೆ.

**1. ಅವನ ಬಿಡುಗಡೆ; ಅನಂತರದ ಚರಿತ್ರೆ.**-ಪೌಲನು ತನ್ನ ಮೊದಲನೆಯ ರೋಮನ್ ಸೆರೆಮನೆಯಿಂದ ಬಿಡುಗಡೆ ಮಾಡಲ್ಪಟ್ಟಿದ್ದು ಅದರ ನಿರೀಕ್ಷೆಯ ಬಗ್ಗೆ ಅವನಲ್ಲಯ ಭರವಸೆಯಲ್ಲಿ ಅನ್ವಯಿಸಲ್ಪಟ್ಟಿದೆ (ಫಿಲಿಪ್ಪಿ 1:25, 26; 2:24; ಫಿಲೆಮೋನ 22), ಮತ್ತು ಅವನ ಮೊದಲಿನ ಚರಿತ್ರೆಯಲ್ಲಿ ಹೊಂದಲಾರದ ಘಟನೆಗಳ ಮತ್ತು ಪ್ರಯಾಣಗಳ ಸೂಚನೆಗಳಿಂದ ಮತ್ತು ವಿಶ್ವವ್ಯಾಪ್ತಿ ಸಾಂಪ್ರದಾಯದಿಂದ ದೃಢಪಡಿಸಲ್ಪಟ್ಟಿದೆ.

1 ತಿಮೊಥೆ ಮತ್ತು ತೀತನಿಗೆ ಬರೆದ ಪತ್ರಿಕೆಗಳಿಂದ, ಅವನು ಎಫೆಸನ್ನು ಪುನಃ ಸಂದರ್ಶಿಸಿದನು, ಕ್ರೇತದಲ್ಲಿ ಪ್ರಯಾಣಮಾಡಿದನು, ಮತ್ತು ಮಕೆದೋನ್ಯ ಹಾಗೂ ಗ್ರೀಸ್‌ಗಳಿಗೆ ಇನ್ನೊಂದು ಸಂದರ್ಶನ ಕೊಟ್ಟನು ಎಂದು ನಾವು ಸಂಗ್ರಹಿಸುತ್ತೇವೆ, ಈ ಸಮಯದಲ್ಲಿ ಅವನು ತಮೊಥೆಯನಿಗೆ ಮೊದಲನೆಯ ಪತ್ರಿಕೆಯನ್ನು ಮತ್ತು ತೀತನಿಗೆ ಪತ್ರಿಕೆಯನ್ನು ಬರೆದನು.

**2. ಅವನ ಕೊನೆಯ ಸೆರೆಮನೆ ವಾಸ ಮತ್ತು ಹತಸಾಕ್ಷಿ ಮರಣ.**-ಪೌಲನು ಕ್ರಿ.ಶ. 63ರಲ್ಲಿ ಬಿಡುಗಡೆ ಮಾಡಲ್ಪಟ್ಟನು. ಮುಂದಿನ ವರ್ಷ ರೋಮ್‌ದಲ್ಲಿ ದೊಡ್ಡ ಬೆಂಕಿ ಅನಾಹುತ ಸಂಭವಿಸಿತು. ತನ್ನ ಕಡೆಗೆ ಇದ್ದ ಸಂಶಯವನ್ನು ಬೇರೆ ಕಡೆಗೆ ತಿರುಗಿಸಲು, ಚಕ್ರವರ್ತಿ ನೀಕೊನು ಕ್ರೈಸ್ತರ ಮೇಲೆ ಅಪರಾಧ ಹೊರಿಸಿದನು ಮತ್ತು ಮೊದಲನೆಯ ರಾಜಕೀಯ ಹಿಂಸೆಯನ್ನು ಪ್ರಾರಂಭಿಸಿದನು. ಪೌಲನು, ರೋಮ್‌ದಿಂದ ದೂರದಲ್ಲಿ, ಕೆಲ ಸಮಯ ತನ್ನ ಕಾರ್ಯ ಮುಂದರಿಸಿದನು; ಆದರೆ, ಕೊನೆಗೆ, ಅವನು ಬಂಧಿಸಲ್ಪಟ್ಟನು ಮತ್ತು ರೋಮ್‌ಗೆ ಹಿಂದಿರುಗಿ ತರಲ್ಪಟ್ಟನು. ಬೆಂಕಿ ಹಚ್ಚುವದಕ್ಕೆ ಪ್ರಚೋಧಿಸಿದ ಅಪರಾಧ ಅವನ ಮೇಲೆ ಹೊರಿಸಿರುವ ಸಾಧ್ಯತೆಯಿದೆ. ಅವನ ಎರಡನೆಯ ಸೆರೆಮನೆ ವಾಸವು ಮೊದಲಿನದಕ್ಕಿಂತ ಹೆಚ್ಚು ಕಠಿಣವಾದದ್ದಾಗಿತ್ತು. ತನ್ನ ಸೆರೆಯ ಮನೆಯಿಂದ, ಸಮೀಪದಲ್ಲಿಯ ತನ್ನ ಹತಸಾಕ್ಷಿ ಮರಣದ ನಿರೀಕ್ಷೆಯಲ್ಲಿ, ಅವನು ತಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆಯನ್ನು - ತನ್ನ ಕೊನೆಯ ಪತ್ರಿಕೆಯನ್ನು ಬರೆದನು, ಅವನ ದೊಡ್ಡ ಹೃದಯವನ್ನು ಹೆಚ್ಚಾಗಿ ಪರೀಕ್ಷಿಸಿದ್ದು ಹಳೇ ಸ್ನೇಹಿತರುಗಳು ಇಲ್ಲದಿದ್ದದ್ದು ಮತ್ತು ಕೆಲವರು ಅವನನ್ನು ಬಿಟ್ಟು ಹೋದದ್ದು. ಕೊನೆಯವರೆಗೆ ಲೂಕನು ಅವನೊಂದಿಗಿದ್ದನು, ಪರಿಶುದ್ಧ ಬರಹಗಳಿಂದ ವಯಸ್ಸಾದ ಅಪೊಸ್ತಲನ ಮೇಲೆ ಬೀಳುವ ಕೊನೆಯ ಬೆಳಕು, ತಿಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆಯ ಮುಕ್ತಾಯದ ಅಧ್ಯಾಯದಿಂದ; ಆದರೆ ನಂಬಲರ್ಹ ಸಾಂಪ್ರದಾಯದ ಪ್ರಕಾರವಾಗಿ, ಅವನು ಶಿಕ್ಷಿಸಲ್ಪಟ್ಟು ಸುಮಾರು ಕ್ರಿ.ಶ. 68ರಲ್ಲಿ ಹತಸಾಕ್ಷಿ ಮರಣ ಹೊಂದಿದನು. ಪೌಲನ ರೋಮಾಯ ನಾಗರಿಕತ್ವವು ಬಹಳ ಸಲ ಕ್ರೈಸ್ತರನ್ನು ಹಿಂಸಿಸಿದಂಥ ದೀರ್ಘ ಕಾಲದ ಮರಣ ಹೊಂದದಂತೆ ಮಾಡಿದ್ದಿರ ಬಹುದು. ಅವನು ಬಹುಶಃ ರೋಮ್‌ದ ಗೋಡೆಗಳ ಹೊರಗೆ ಶಿರಚ್ಛೇದನ ಮಾಡಲ್ಪಟ್ಟಿರಬೇಕು, ಹೀಗೆ ಅನ್ಯಜನರಿಗೆ ಮಹಾ ಅಪೊಸ್ತಲನಾಗಿದ್ದವನು ಬಿದ್ದುಹೋದನು, ಅವನ ಜೀವನ ಮತ್ತು ಬರಹಗಳು ಮುಂದಿನ ಸಂತತಿಗಾಗಿ ಕಾದಿಟ್ಟ ಬಹು

ಬೆಲೆಯ ಕೊಡುಗೆಗಳಾಗಿವೆ.

## II. ಇತರ ಅಪೊಸ್ತಲರ ಅನಂತರದ ಚರಿತ್ರೆ.

**1. ಪೇತ್ರನ ಕೊನೆಯ ನೋಟ.**-ಅಪೊಸ್ತಲರ ಕೃತ್ಯದಲ್ಲಿ ಕೊನೆಯ ಉಲ್ಲೇಖವು ಅಪೊಸ್ತಲಿ ಕೌನ್ಸಿಲಿನಲ್ಲಿ ಆಗಿದೆ (ಅಪೊಸ್ತಲರ ಕೃತ್ಯಗಳು 15:7-11). ಪೌಲನು, ಗಲಾತ್ಯದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ವರ್ಷಗಳ ನಂತರ ಅರ್ಧ ಡಜನ್ ಪತ್ರಿಕೆಗಳನ್ನು ಬರೆದನು, ಅಂತಿಯೋಕ್ಯದಲ್ಲಿ ಪೇತ್ರನು ದೋಷಿಯಾಗಿ ಕಂಡದ್ದರ ಬಗ್ಗೆ ಉಲ್ಲೇಖಿಸಿದ್ದಾನೆ (ಗಲಾತ್ಯ 2:9-14). ಬಹುಶಃ ಈ ಘಟನೆಯು ಕೌನ್ಸಿಲ್ ಆದ ಕೂಡಲೇ ಮತ್ತು ಪೌಲನ ಎರಡನೆಯ ಮಿಶನರಿ ಪ್ರಯಾಣದ ಮೊದಲು ಸಂಭವಿಸಿರ ಬಹುದು. ಇದು ಹೊಸ ಒಡಂಬಡಿಕೆಯಲ್ಲಿ ಪೇತ್ರನಿಗೆ ಸಂಬಂಧಿಸಿದ ಕೊನೆಯ ಐತಿಹಾಸಿಕ ಸೂಚನೆಯಾಗಿರುತ್ತದೆ. ಆದರೆ ಅವನ ಎರಡು ಪತ್ರಿಕೆಗಳು ನಮಗೆ ಬಂದಿರುತ್ತವೆ. ಮೊದಲನೆಯದು ಬಾಬಿಲೋನಿನಿಂದ ಬರೆಯಲ್ಪಟ್ಟಿದೆ, ಬಹಶಃ ಇದು ರೋಮ್‍ಗೆ ಸಾಂಕೇತಿಕವಾದ ಮಾತಾಗಿದೆ, ಮತ್ತು ಚಿಕ್ಕ ಆಶಿಯದ ಕ್ರೈಸ್ತರಿಗೆ ಸಂಬೋಧಿಸಲ್ಪಟ್ಟಿರುತ್ತದೆ (1 ಪೇತ್ರ 1:1; 5:13). ಸೀಲ ಮತ್ತು ಮಾರ್ಕನಿಗೆ ಉಲ್ಲೇಖಿಸಿದ್ದರಿಂದ, ಅದು ಪೌಲನ ಮೊದಲನೆಯ ಮತ್ತು ಎರಡನೆಯ ರೋಮನ್ ಸೆರೆ ವಾಸಗಳ ಮಧ್ಯದಲ್ಲಿ ಬರೆಯಲ್ಪಟ್ಟಿರ ಬಹುದು. ಎರಡನೆಯ ಪತ್ರಿಕೆಯು ಪೌಲನು ಪತ್ರಿಕೆಯೊಂದಿಗೆ ಪರಿಚಿತಿಯನ್ನು ತೋರಿಸುತ್ತದೆ (2 ಪೇತ್ರ 3:15, 16) ಮತ್ತು ಪೇತ್ರನ ಹತಸಾಕ್ಷಿ ಮರಣದ ನಿರೀಕ್ಷೆಯನ್ನು ತೋರಿಸುತ್ತದೆ (2 ಪೇತ್ರ 1:13-15; ಹೋಲಿಸು ಯೋಹಾನ 21:18, 19). ಮೊದಲಿನ ಕ್ರೈಸ್ತ ಲೇಖಕರಿಗನುಗುಣವಾಗಿ, ಈ ನಿರೀಕ್ಷೆಯು ಪೌಲನ ಮರಣದ ನಂತರ ಬೇಗನೇ ರೋಮ್‍ದಲ್ಲಿ ನೆರವೇರಿತು. ಪೇತ್ರನು ರೋಮನ್ ನಾಗರಿಕತ್ವದ ಹಕ್ಕನ್ನು ಅನುಭವಿಸಲಿಲ್ಲ, ಶ್ರಮೆ ಹೊಂದಿದವನು. ತನ್ನ ಒಡೆಯನಂತೆಯೇ ಶಿಲುಬೆಯ ಮೇಲೆ ಶ್ರಮೆ ಹೊಂದಿದನು. ಸಂಪ್ರದಾಯವನ್ನು ನಂಬುವದಾದರೆ, ತನ್ನ ಯಜಮಾನನಂತೆ ಶ್ರಮೆ ತಾಳಲು ಯೋಗ್ಯನಲ್ಲದ್ದರಿಂದ, ತಲೆಕೆಳಗಾಗಿ ಶಿಲುಬೆಗೆ ಹಾಕಬೇಕೆಂದು ಅವನು ಬೇಡಿಕೊಂಡನು.

**2. ಯೋಹಾನನ ಅನಂತರದ ಜೀವಿತ.**-ಯೋಹಾನನು ಬಹು ಬೇಗನೇ ಅಪೊಸ್ತಲರ ಕೃತ್ಯಗಳ ಚರಿತ್ರೆಯಿಂದ ಬಿದ್ದುಹೋಗುತ್ತಾನೆ, ಸಮಾರ್ಯದಲ್ಲಿ ಫಿಲಿಪ್ಪನ ಸೇವೆಯೊಂದಿಗೆ ಸಂಬಂಧಿಸಿ ಕೊನೆಯದಾಗಿ ನಮೂದಿಸಲ್ಪಟ್ಟಿದ್ದಾನೆ (ಅಪೊಸ್ತಲರ ಕೃತ್ಯಗಳು 8:14, 25). ಕೌನ್ಸಿಲಿಗೆ ಸಂಬಂಧಿಸಿ ಅಪೊಸ್ತಲರ ಕೃತ್ಯಗಳಲ್ಲಿ ಅವನ ಹೆಸರು ಹೇಳಲ್ಪಟ್ಟಿಲ್ಲ (ಅಪೊಸ್ತಲರ ಕೃತ್ಯಗಳು 15); ಆದರೆ ಪೌಲನು (ಗಲಾತ್ಯ 2:9) ಅದಕ್ಕೆ ಸಂಬಂಧಿಸಿ ಅವನನ್ನು ಉಲ್ಲೇಖಿಸುತ್ತಾನೆ. ಸುವಾರ್ತಾ ಪ್ರಸರಣಾ ಕಾರ್ಯದಲ್ಲಿ ಯೋಹಾನನು ಗಣ್ಯನಾಗಿ ಕಾಣಿಸಿಕೊಳ್ಳದಿದ್ದರೂ, ಪೌಲನ ನಂತರ ಅವನ ಬರಹಗಳು ಇತರ ಯಾವುದೇ ಅಪೊಸ್ತಲರಿಗಿಂತ ಹೆಚ್ಚಿನ ಸ್ಥಾನದಲ್ಲಿ ಇರುತ್ತವೆ. ಕೊನೆಯ ಸುವಾರ್ತೆ, ಮೂರು ಪತ್ರಿಕೆಗಳು ಮತ್ತು ಪ್ರಕಟನೆಯ ಗ್ರಂಥ ಇವು ಅವನ ಲೇಖನಿಯಿಂದ ಬಂದವುಗಳಾಗಿವೆ. ಅವನ ಅನಂತರದ ವರ್ಷಗಳು ಬಹುಶಃ ಏಶಿಯಾ ಮೈನರದಲ್ಲಿ, ಎಫೆಸವನ್ನು ಕಾರ್ಯಾಚರಣೆಯ ಕೇಂದ್ರವನ್ನಾಗಿಟ್ಟು ಕಳೆಯಲ್ಪಟ್ಟವು, ಒಂದು ವರ್ಷದ ವರೆಗೆ ಅವನು ಪತ್ಮೋಸ್ ದ್ವೀಪಕ್ಕೆ ಗಡೀಪಾರು ಮಾಡಲ್ಪಟ್ಟಿದ್ದನು (ಪ್ರಕಟನೆ 1:9). ಅಲ್ಲಿ ಅವನು ಪ್ರಕಟನೆ ಗ್ರಂಥವನ್ನು ಬರೆದನು. ಟ್ರಾಜನ್‍ನ ಆಳ್ವಿಕೆಯ ವರೆಗೆ ಅವನು ಜೀವಿಸಿದನು (ಕ್ರಿ.ಶ. 98-117), ಶತಮಾನದ ಅಂತ್ಯದಲ್ಲಿಯ ಸುಮಾರಿಗೆ ಮರಣ ಹೊಂದಿದನು, ತನ್ನ ನಂಬಿಕೆಯನ್ನು ತನ್ನ ರಕ್ತದಿಂದ ಮುದ್ರೆಹಾಕಿದ, ಬಹುಶಃ ಕೇವಲ

ಅಪೊಸ್ತಲನಾಗಿದ್ದನು.

**3. ಇತರ ಅಪೊಸ್ತಲರು - ಮುಕ್ತಾಯ.**-ನಾವು ಈಗಾಗಲೇ ನೋಡಿದಂತೆ (ಅಪೊಸ್ತಲರ ಕೃತ್ಯಗಳು 12:1, 2) ಯೋಹಾನನ ಸಹೋದರ ಯಾಕೋಬನು ಬೇಗನೇ ಹತಸಾಕ್ಷಿಯಾಗಿ ಬಿದ್ದುಹೋದನು. ಇತರ ಅಪೊಸ್ತಲರ ಬಗ್ಗೆ ಹೊಸ ಒಡಂಬಡಿಕೆಯು ಇನ್ನು ಹೆಚ್ಚು ಸಂಗತಿಗಳನ್ನು ಹೇಳುವುದರ ಬಗ್ಗೆ ನಿಶ್ಚಿತತೆಯಿರುವುದಿಲ್ಲ. ಯಾಕೋಬನ ಮತ್ತು ಯೂದನ ಎರಡು ಪತ್ರಿಕೆಗಳು ಉಳಿದುಕೊಂಡಿವೆ. ಅವುಗಳ ಗ್ರಂಥಕರ್ತರನ್ನು ಗುರುತಿಸುವುದು ತೀರಿಸದ ಪ್ರಶ್ನೆಗಳಲ್ಲಿ ಒಂದಾಗಿರುತ್ತದೆ. ಅಭಿಪ್ರಾಯಗಳು ಹೆಚ್ಚೆಚ್ಚಾಗಿ ಯೇಸುವಿನ ಸಹೋದರರ ಕಡೆಗೆ ಒಲವು ತೋರಿಸುತ್ತವೆ. ಸಾಂಪ್ರದಾಯವು ಭಿನ್ನ ವಾದ ದೇಶಗಳಲ್ಲಿ ಭಿನ್ನವಾದ ಅಪೊಸ್ತಲರು ಸುವಾರ್ತೆಸಾರಿದ್ದನ್ನು ಸಂಬಂಧಿಸುತ್ತವೆ. ಮತ್ತು ಯೋಹಾನನನ್ನು ಬಿಟ್ಟು ಎಲ್ಲಾ ಅಪೊಸ್ತಲರು ಹತಸಾಕ್ಷಿ ಮರಣ ಹೊಂದಿದ್ದನ್ನು ಸಂಬಂಧಿಸಿ ಹೇಳುತ್ತದೆ.

ಎಲ್ಲರ, ಅದರಲ್ಲಿಯೂ ಅತಿದೊಡ್ಡ ಅಪೊಸ್ತಲರ ಅಂತಿಮ ಕಾರ್ಯಗಳ ಮೇಲೆ ಅಸ್ಪಷ್ಟತೆಯಿರುವುದು ಆಳವಾಗಿ ಮಹತ್ವದ್ದಾಗಿದೆ. ಅಪೊಸ್ತಲಿಕ ಇತಿಹಾಸದಲ್ಲಿ ವೈಯಕ್ತಿಕ ಅಂಶವು ಎರಡನೆಯದ್ದಾಗಿದೆ. ಜನರ ಸುತ್ತ ಒಂದು ಅಳತೆಯ ಆಸಕ್ತಿಯು ಕೊಡುತ್ತದೆ; ಆದರೆ ಅತಿಶ್ರೇಷ್ಠ ಆಸಕ್ತಿಯು ಆದ ಎಂದೆಂದಿಗೂ ವಿಶಾಲವಾಗುವ ವೃತ್ತಗಳಲ್ಲಿ ಕೇಂದ್ರೀ ಕರಿಸಲ್ಪಡುತ್ತದೆ. ಸುವಾರ್ತೆಯ ಚರಿತ್ರೆಯಲ್ಲಿ, ವ್ಯತಿರಿಕ್ತವಾಗಿ, ವೈಯಕ್ತಿಕ ವಿಷಯವು ಪ್ರಭಲವಾಗಿರುತ್ತದೆ, ಆಸಕ್ತಿಯು *ಒಬ್ಬ ವ್ಯಕ್ತಿಯಲ್ಲಿ* ಕೇಂದ್ರೀಕರಿಸುತ್ತದೆ. ಕ್ರಿಸ್ತನು ತಾನೇ ಯಾವಾಗಲೂ ಯಾವುದೇ ತನ್ನ ವಾಕ್ಯ ಇಲ್ಲವೇ ಕಾರ್ಯಕ್ಕಿಂತ ಹೆಚ್ಚು ದೊಡ್ಡವನಾಗಿರುತ್ತಾನೆ, ಭೂಲೋಕದಿಂದ ಆತನು ಹೊರಟು ಹೋದದ್ದರ ಮೇಲೆ ಯಾವ ಅಸ್ಪಷ್ಟತೆಯೂ ತೊಂದರೆ ಕೊಡಲಿಲ್ಲ: ಅವನು ಕಯಾನಿಗೆ ಮುಖ್ಯಕಲ್ಲಾಗಿದ್ದಾನೆ - ಸುವಾರ್ತೆಗಳದು ಮಾತ್ರವೇ ಅಲ್ಲ, ಹೊಸ ಒಡಂಬಡಿಕೆಯದು ಮಾತ್ರವೇ ಅಲ್ಲ, ಆದರೆ ಇಡೀ ಬೈಬಲಿನ ಕಥೆಯಾಗಿದೆ. *ಆತನಿಲ್ಲದ,* ಇಡೀ ರಚನೆಯು ನಿರೀಕ್ಷೆಯಿಲ್ಲದ ವಿನಾಶದಲ್ಲಿ ಬಿದ್ದು ಹೋಗುವುದು; *ಆತನೊಂದಿಗೆ* ಸಮಾನತೆಯಿಲ್ಲ ಹಾಗೂ ಸದಾ ಉಳಿಯುವ ಸೌಂದರ್ಯದಲ್ಲಿ ನಿಂತುಕೊಳ್ಳುತ್ತದೆ.

© 2009 Truth for Today